# ವಲಸೆ ಕಾರ್ಮಿಕರ ಪ್ರಣಾಳಿಕೆಗಳು
# ಕರ್ನಾಟಕ ರಾಜ್ಯ ವಿಧಾನಸಭೆ ಚುನಾವಣೆ – 2018

---

*ಸಲ್ಲಿಕೆ: ಕಟ್ಟಡ ಹಾಗೂ ಇತರೇ ನಿರ್ಮಾಣದ ವಲಸೆ ಕಾರ್ಮಿಕರ ಸಂಘ, ಕರ್ನಾಟಕ*
*ಸೌಕರ್ಯಕಾರರು: ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್*

**ಹಿನ್ನೆಲೆ:**

ಹಲವಾರು ವರ್ಷಗಳಿಂದ ಇಂದಿನವರೆಗೂ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿರುವ ನಮ್ಮ ಸ್ವಂತ ಊರಿನಲ್ಲಿ ಬರಗಾಲದಿಂದ ನೀರಿಲ್ಲದೇ, ಕೃಷಿ ಮಾಡಲು ಆಗದೇ ನಮ್ಮೆಲ್ಲಾ ಭೂಮಿಗಳು ಬರಡು ಭೂಮಿಗಳಾಗಿ ಮಾರ್ಪಟ್ಟಿತ್ತು. ಇದರಿಂದಾಗಿ ನಾವು ಯಾವುದೇ ಆದಾಯವಿಲ್ಲದೇ ಕುಟುಂಬದ ನಿರ್ವಹಣೆಗಾಗಿ ಪರದಾಡುವ ಪರಿಸ್ಥಿತಿ ಉಂಟಾಗಿತ್ತು. ಉದ್ಯೋಗಗಳು ಇಲ್ಲದೇ ದಿನನಿತ್ಯದ ಜೀವನ ನಡೆಸಲು ಕಷ್ಟಸಾಧ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಪ್ರಮುಖವಾಗಿ ಉತ್ತರ ಕರ್ನಾಟಕದ ಜಿಲ್ಲೆಗಳಿಂದ ಹಾಗೂ ದೇಶದ ಬೇರೆ ಬೇರೆ ರಾಜ್ಯಗಳಿಂದ ಹಲವಾರು ಕುಟುಂಬಗಳು ನಮ್ಮ ಜೀವನೋಪಾಯಕ್ಕಾಗಿ ಉದ್ಯೋಗ ಅರಸಿ ಬಂದು ಪ್ರಮುಖವಾಗಿ ಉಡುಪಿ, ದಕ್ಷಿಣ ಕನ್ನಡ, ಬೆಂಗಳೂರು ಮುಂತಾದ ಜಿಲ್ಲೆಗಳ ನಗರ, ಪಟ್ಟಣ ಮತ್ತು ಹಳ್ಳಿಗಳ ಹಲವಾರು ಪ್ರದೇಶಗಳಲ್ಲಿ ನೆಲೆಸಿದ್ದೇವೆ. ಇಂತಹ ಪ್ರದೇಶಗಳಲ್ಲಿ ಉದ್ಯೋಗ ಸಿಗುವ ಸಾಧ್ಯತೆ ಹೆಚ್ಚು, ಎಲ್ಲಾ ಸೌಕರ್ಯಗಳನ್ನು ಮಾಡಿಕೊಂಡು ನಮ್ಮ ಕುಟುಂಬಗಳ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದು ಎಂಬ ನಂಬಿಕೆಯಿಂದ ನಮ್ಮ ಸಂಬಂಧಿಕರು, ಕುಟುಂಬದ ಇತರ ಸದಸ್ಯರು, ಸ್ವಂತ ಮನೆ–ಗದ್ದೆ–ಜಾಗ ಎಲ್ಲವನ್ನೂ ಬಿಟ್ಟು, ಹಲವಾರು ವರ್ಷಗಳಿಂದ ಇಲ್ಲಿ ಬಂದು ನೆಲೆಸಿದ್ದೇವೆ. ಹೀಗೆ ಬಂದಂತಹ ನಾವು ಇಲ್ಲಿ ದಿನಗೂಲಿ ಮಾಡಿ ಜೀವನ ಸಾಗಿಸುತ್ತಿದ್ದೇವೆ.

ನಾವು ಹೆಚ್ಚಾಗಿ ಆಯಾ ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಂಡಿದ್ದೇವೆ. ರಸ್ತೆಯ ರಚನೆ, ದುರಸ್ತಿ ಕೆಲಸಗಳು ಮತ್ತು ಡಾಂಬರೀಕರಣ, ನೀರು ಸರಬರಾಜಿಗೆ ಅನುಕೂಲ ಮಾಡಲು ಪೈಪ್‌ಲೈನ್ ಅಳವಡಿಕೆ, ದೂರವಾಣಿ, ವಿದ್ಯುತ್ ಸಂಪರ್ಕಕ್ಕೆ ಭೂಮಿಯನ್ನು ಅಗೆದು ಕೇಬಲ್ ಅಳವಡಿಸುವ ಕೆಲಸಗಳು, ಚರಂಡಿ–ಒಳಚರಂಡಿ ರಚನೆ, ಕಲ್ಲುಕೋರೆಗಳಲ್ಲಿ ಕೆಲಸ, ಪಂಚಾಯತ್, ಪಟ್ಟಣ, ನಗರಗಳ ಸ್ವಚ್ಛತೆ, ಎಲ್ಲಾ ರೀತಿಯ ಕಟ್ಟಡದ ಕೆಲಸ ಅವರ ಪ್ರಮುಖ ಉದ್ಯೋಗ. ಇವಲ್ಲದೇ ಕೃಷಿ ಕೆಲಸ, ಹಮಾಲಿ ಕೆಲಸ, ಚಿಂದಿ (ಗುಜರಿ) ಆಯುವುದು, ಭವಿಷ್ಯ ಹೇಳುವುದು, ಸಂಗೀತ ಹೇಳಿ ಸಂಪಾದನೆ, ಮರಕೊಯ್ಯುವುದು, ಕಟ್ಟಿಗೆ ಮಿಲ್‌ಗಳಲ್ಲಿ ಸಹಾಯಕರಾಗಿ ಕೆಲಸ, ಹೊಳೆಯಿಂದ ಮರಳನ್ನು ತೆಗೆಯುವುದು, ಮೀನು ಹಿಡಿಯುವುದು ಮತ್ತು ಮೀನು ಹೊತ್ತು ತುಂಬುವುದು, ಮೀನು ಕಾರ್ಖಾನೆ, ಐಸ್ ಫ್ಯಾಕ್ಟರಿ – ಹೀಗೆ ಈ ಜಿಲ್ಲೆಯ ಶ್ರಮದ ಕೆಲಸದ ಕ್ಷೇತ್ರದಲ್ಲಿ ದಶಕಗಳಿಂದ ದುಡಿದುಕೊಂಡು ಬಂದಿದ್ದೇವೆ. ಹೀಗೆ ಬಂದಿರುವ ನಾವು ಕೇವಲ ಉಡುಪಿ ಜಿಲ್ಲೆಯೊಂದರಲ್ಲಿಯೇ ಅಂದಾಜು 4000ಕ್ಕೂ ಹೆಚ್ಚು ಕುಟುಂಬಗಳು ವಾಸವಾಗಿದ್ದು; ಮಕ್ಕಳು, ಮಹಿಳೆಯರೂ ಸೇರಿದಂತೆ ನಾವು ಅಂದಾಜು 12000ಕ್ಕೂ ಹೆಚ್ಚು ಜನರಿದ್ದೇವೆ. ಬೆಂಗಳೂರಿನಲ್ಲಿ ಇಂತಹ ಸುಮಾರು 3,200 ಕುಟುಂಬಗಳು ವಾಸವಾಗಿದ್ದು, 16000ಕ್ಕೂ ಹೆಚ್ಚು ಜನರಿದ್ದೇವೆ. ನಮ್ಮೆಲ್ಲರ ಈ ಕೆಲಸಗಳಿಂದ, ಶ್ರಮದಿಂದ ಜಿಲ್ಲೆಯ ಅಭಿವೃದ್ಧಿ, ರಾಜ್ಯದ ಅಭಿವೃದ್ದಿ, ಜಿಲ್ಲೆಯ ಮತ್ತು ರಾಜ್ಯದ ಆದಾಯ ಹೆಚ್ಚಳದಲ್ಲಿ ನಾವು ಪಾಲುದಾರರಾಗಿದ್ದೇವೆ. ಆದರೆ ನಮ್ಮ ಅಭಿವೃದ್ಧಿಗೆ ರಾಜ್ಯದಿಂದ ಇದುವರೆಗೂ ಪರಿಣಾಮಕಾರಿ ಸಂಪೂರ್ಣ ಸ್ಪಂದನೆ ಸಿಕ್ಕಿಲ್ಲ. ರಾಜ್ಯದ ಬಜೆಟ್‌ನಲ್ಲಿ ವಲಸೆ ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಯಾವುದೇ ಪ್ರತ್ಯೇಕ ಅನುದಾನ ಮೀಸಲಾಗಿಟ್ಟಿಲ್ಲ. ನಮಗೋಸ್ಕರ, ನಮ್ಮ ಮಕ್ಕಳು–ಮಹಿಳೆಯರಿಗೋಸ್ಕರ ಯಾವುದೇ ಪ್ರತ್ಯೇಕ ಕಾರ್ಯಕ್ರಮಗಳನ್ನು ಯೋಜಿಸಿಲ್ಲ.

**ಪರಿಸ್ಥಿತಿ:**

ಇಷ್ಟೆಲ್ಲಾ ಶ್ರಮಪಟ್ಟರೂ ದಶಕಗಳಿಂದ ಇಲ್ಲಿ ಬದುಕುತ್ತಿದ್ದರೂ ಒಂದು ನಾಗರಿಕ ಸಮಾಜಕ್ಕೆ ಸಿಗಬೇಕಾಗದ ಕನಿಷ್ಟ ಅಗತ್ಯತೆಗಳು ಇನ್ನೂ ನಮಗೆ ಸಿಕ್ಕಿಲ್ಲ. ಎಲ್ಲರಿಗೂ ಸಿಗುವ ಹಾಗೆ ಕುಡಿಯುವ ನೀರು, ಇರಲು ಮನೆ, ಸ್ಥಳ, ಬೆಳಕು, ಶಾಲೆ, ಅಂಗವಾಡಿ, ಆರೋಗ್ಯ ಸೇವೆ, ವೃದ್ದಾಪ್ಯ ವೇತನ, ಅಂಗವಿಕಲ ವೇತನ, ಹೆರಿಗೆ ಭತ್ಯೆ, ವಿಧವಾ ವೇತನ, ವೃದ್ಧಾಪ್ಯ ವೇತನ, ಆರೋಗ್ಯ ವಿಮೆ ಮುಂತಾದ ಸರ್ಕಾರಿ ಸೌಲಭ್ಯಗಳು ನಮಗೆ ಸರಿಯಾಗಿ ದೊರಕುತ್ತಿಲ್ಲ. ಯಾವುದೇ ಸೌಲಭ್ಯ ಪಡೆಯಲೂ ಸಹ ಗುರುತಿನ ಚೀಟಿ ಅಗತ್ಯ ಎಂದು ಹೇಳುತ್ತಾರೆ, ಆದರೆ ಗುರುತಿನ ಚೀಟಿ ಪಡೆಯಲು ವಾಸ್ತವ್ಯದ ದಾಖಲೆಗಳು ಬೇಕು ಎನ್ನುತ್ತಾರೆ. ಮತದಾರರ ಪಟ್ಟಿಗೆ ಸೇರ್ಪಡೆಯಾಗಬೇಕಾದರೆ ಪಡಿತರ ಚೀಟಿ ಅವಶ್ಯಕ ಎನ್ನುತ್ತಾರೆ. ಹೀಗೆ ಒಂದಕ್ಕೊಂದು ಸಂಬಂಧವಿಟ್ಟು ಎಲ್ಲಾ

ಸೌಲಭ್ಯಗಳಿಂದ ವಂಚಿತರಾಗಿದ್ದೇವೆ. ಕೆಲವೊಮ್ಮೆ ಎಲ್ಲಾ ದಾಖಲೆಗಳಿದ್ದರೂ ಸಹ ಯಾವುದಾದರೊಂದು ವ್ಯವಸ್ಥೆಯಲ್ಲಿರುವ ಲೋಪ–ದೋಷಗಳಿಂದಾಗಿ ನಾವು ಸೌಲಭ್ಯದಿಂದ ಹೊರಗುಳಿದಿದ್ದೇವೆ. ಮೂಲಸೌಕರ್ಯಗಳಾದ ವಸತಿ, ನೀರು, ಶೌಚಾಲಯ,

ವಿದ್ಯುತ್ ಮುಂತಾದವುಗಳು ಲಭ್ಯವಿಲ್ಲದೇ ಸಮುದಾಯವಾಗಿ ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಯೊಂದಿಗೆ ಮಕ್ಕಳು, ಮಹಿಳೆಯರು ರಕ್ಷಣೆ, ಆರೋಗ್ಯ, ಶಿಕ್ಷಣಕ್ಕೆ ಸಂಬಂಧಿಸಿದಂತೆ ಬೇರೆಯದೇ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಹತ್ತಾರು ವರ್ಷಗಳಿಂದ ನಮ್ಮೆಲ್ಲರ ಈ ಅಳಲನ್ನು ಪದೇ ಪದೇ, ಹಲವಾರು ಬಾರಿ ಹೇಳಿಕೊಂಡರೂ ಇಲ್ಲಿಯವರೆಗೆ ಯಾವುದೇ ರೀತಿಯ ಸಮಗ್ರ ಪರಿಹಾರ ಸಿಕ್ಕಿಲ್ಲ.

ರಾಜ್ಯದ ವಿವಿಧ ಜಿಲ್ಲೆಗಳ ಹಲವಾರು ಪ್ರದೇಶಗಳಲ್ಲಿ ಸರ್ಕಾರಿ, ಖಾಸಗಿ ಜಾಗಗಳಲ್ಲಿ ಅಸುರಕ್ಷಿತ ಟೆಂಟ್‌ಗಳಲ್ಲಿ, ರಸ್ತೆ ಬದಿಯಲ್ಲಿ ಟೆಂಟ್‌ಗಳಲ್ಲಿ, ಯಾವುದೇ ಮೂಲಭೂತ ಸೌಕರ್ಯಗಳಿಲ್ಲದ ಬಾಡಿಗೆ ಮನೆಗಳಲ್ಲಿ, ವಾಸಿಸುತ್ತಿರುವ ನಮ್ಮ ಈ ಕುಟುಂಬಗಳು ನಿರ್ಲಕ್ಷಿತವಾದ, ಬದಿಗೊತ್ತಲ್ಪಟ್ಟ ಸಮುದಾಯಗಳಾಗಿವೆ.

ದೇಶದ ಗೌರವಯುತ, ಪ್ರಜ್ಞಾವಂತ ನಾಗರಿಕರಾದ ನಾವು, ನಮ್ಮ ದೇಶದ ಇತರ ನಾಗರಿಕರಂತೆಯೇ ನಮ್ಮ ಹಕ್ಕುಗಳನ್ನು ಗಮನದಲ್ಲಿಟ್ಟುಕೊಂಡು, ಚುನಾವಣೆಯಲ್ಲಿ ಸ್ಪರ್ಧಿಸುವ ಎಲ್ಲಾ ಪಕ್ಷಗಳ/ಸ್ವತಂತ್ರ ಅಭ್ಯರ್ಥಿಗಳು, ನಮ್ಮ ಸಮುದಾಯದ ಏಳ್ಗೆಗಾಗಿ, ತಮ್ಮ ಜವಾಬ್ದಾರಿ ಮತ್ತು ಉತ್ತರದಾಯಿತ್ವವನ್ನು ಸ್ಪಷ್ಟವಾಗಿ ಪ್ರಮಾಣೀಕರಿಸುವಂತೆ ಹಾಗೂ ನಮ್ಮ ಅಭಿವೃದ್ಧಿಗಾಗಿ ತಮ್ಮ ಬದ್ಧತೆಯನ್ನು ಸ್ಪಷ್ಟಪಡಿಸುವಂತೆ ಈ ಮೂಲಕ ಒತ್ತಾಯಿಸುತ್ತಿದ್ದೇವೆ. ನಮ್ಮ ಪರಿಸ್ಥಿತಿಯನ್ನು ಗಮನಿಸಿ, ಅರ್ಥಮಾಡಿಕೊಂಡು, ಅದಕ್ಕೆ ಪೂರಕವಾದ, ನಮ್ಮ ಸಮುದಾಯದ ಸರ್ವತೋಮುಖ ಏಳ್ಗೆಗೆ ಸಹಕಾರಿಯಾಗುವಂತಹ ನೀತಿ–ನಿಯಮ, ಯೋಜನೆ–ಕಾರ್ಯಕ್ರಮ ರೂಪಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸಬೇಕೆಂದು, ಆ ನಿಟ್ಟಿನಲ್ಲಿ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳು ಈ ಕೆಳಗಿನ ನಮ್ಮ ಪ್ರಮುಖ ಹಕ್ಕೊತ್ತಾಯಗಳನ್ನು ಪರಿಗಣನೆಗೆ ತೆಗೆದುಕೊಂಡು, ತಮ್ಮ ಪ್ರಣಾಳಿಕೆಯಲ್ಲಿ ಇದಕ್ಕೆ ಅತ್ಯಂತ ಪ್ರಥಮ ಆದ್ಯತೆ ನೀಡಬೇಕೆಂದು ಈ ಮೂಲಕ ಕೇಳಿಕೊಳುತ್ತೇವೆ.

**ನಮ್ಮ ಹಕ್ಕೊತ್ತಾಯಗಳು:**

- ರಾಜ್ಯದಾದ್ಯಂತ ವಾಸವಾಗಿರುವ ಲಕ್ಷಾಂತರ ವಲಸೆ ಕಾರ್ಮಿಕರನ್ನು ಗಮನದಲ್ಲಿಟ್ಟುಕೊಂಡು, ವಲಸೆ ಕಾರ್ಮಿಕ ಕುಟುಂಬಗಳಿಗೆ, ಈ ಸಮುದಾಯದ ಮಹಿಳೆಯರಿಗೆ, ಮಕ್ಕಳಿಗೆ ರಾಜ್ಯಮಟ್ಟದ ಪ್ರತ್ಯೇಕ ವಿಶೇಷ ನೀತಿ–ನಿಯಮ ರಚಿಸಬೇಕು. ಆ ಮೂಲಕ ದೇಶದ ನಾಗರಿಕರಿಗೆ ಸಿಗುವ ಎಲ್ಲಾ ಸೌಲಭ್ಯಗಳು ನಮಗೂ, ನಮ್ಮ ಕುಟುಂಬದವರಿಗೂ ಸಿಗುವಂತಾಗಬೇಕು.
- ವಲಸೆ ಕಾರ್ಮಿಕರಿಗೆಂದು ದೇಶ, ರಾಜ್ಯ–ಜಿಲ್ಲೆಯ ಬಜೆಟ್ ಮಂಡನೆಯ ಸಮಯದಲ್ಲಿ ವಿಶೇಷ ಬಜೆಟ್, ಕಾರ್ಯಕ್ರಮ ಹಾಕಿಕೊಳ್ಳಬೇಕು.
- ಕೆಲಸವನ್ನು ಹುಡುಕಿಕೊಂಡು ನಮ್ಮ ಸ್ವಂತ ಊರಿನಿಂದ ಬೇರೆ ಊರಿಗೆ ವಲಸೆ ಬಂದು, ಹಲವಾರು ವರ್ಷಗಳಿಂದ ಅದೇ ಊರಿನಲ್ಲಿಯೇ ನೆಲೆಸಿರುವ ನಮ್ಮನ್ನು, ನಮ್ಮ ಕುಟುಂಬದ ಸದಸ್ಯರನ್ನು ಆಯಾ ಊರಿನ ನಾಗರಿಕರೆಂದು ಗುರುತಿಸಬೇಕು ಹಾಗೂ ಪರಿಗಣಿಸಬೇಕು.
- ಹೀಗೆ ವಲಸೆ ಬಂದ ನಮ್ಮ ಕುಟುಂಬಗಳಿಗೆ ಮನೆ, ಶೌಚಾಲಯ, ಕುಡಿಯುವ ನೀರು, ವಿದ್ಯುತ್, ರಸ್ತೆ, ಬಸ್ ವ್ಯವಸ್ಥೆ, ದಾರಿದೀಪ, ಒಳಚರಂಡಿ ವ್ಯವಸ್ಥೆ ಮುಂತಾದ ಯಾವುದೇ ಸೌಲಭ್ಯವಿಲ್ಲದೇ ಜೋಪಡಿಗಳಲ್ಲಿ ವಾಸಿಸುತ್ತಿದ್ದೇವೆ. ಇದರಿಂದಾಗಿ ನಮ್ಮ ಕುಟುಂಬಗಳ ಮಹಿಳೆಯರು ಮತ್ತು ಮಕ್ಕಳು ಅತ್ಯಂತ ಹೆಚ್ಚಿನ ರಕ್ಷಣೆಯ ಸಮಸ್ಯೆ ಎದುರಿಸುತ್ತಿದ್ದಾರೆ. ನಮ್ಮ ದಿನನಿತ್ಯದ ಜೀವನಕ್ಕೆ ಅಗತ್ಯವಾದ ಈ ಎಲ್ಲಾ ವ್ಯವಸ್ಥೆಗಳು ಸಿಗುವಂತೆ ಮಾಡಲು ತಮ್ಮ ಪ್ರಣಾಳಿಕೆಗಳಲ್ಲಿ ಪ್ರಥಮ ಆದ್ಯತೆ ನೀಡಬೇಕು. ಕಾರ್ಮಿಕರ ಕಲ್ಯಾಣ ನಿಧಿಯಿಂದ ವಲಸೆ ಕಾರ್ಮಿಕರಾದ ನಮಗೆ ಅತ್ಯಂತ ಅಗತ್ಯವಾಗಿರುವ ಈ ಸೌಲಭ್ಯಗಳನ್ನು ಪಡೆದುಕೊಳ್ಳಲು ಅನುವು ಮಾಡಿಕೊಡಬೇಕು.
- ನಾಗರಿಕ ಸೌಲಭ್ಯಗಳಾದ ಪಡಿತರ ಚೀಟಿ, ಪಡಿತರ ವ್ಯವಸ್ಥೆ, ಮತದಾರರ ಗುರುತಿನ ಚೀಟಿ ಮುಂತಾದವುಗಳನ್ನು ಪ್ರತಿಯೊಬ್ಬರಿಗೂ ಸಿಗುವಂತಾಗಬೇಕು. ಕಾನೂನಿನ ಪ್ರಕಾರ ಈಗಾಗಲೇ ಕಾರ್ಮಿಕರಿಗೆ ಸಿಗಬೇಕಾದ ಎಲ್ಲಾ ಸೌಲಭ್ಯಗಳು ನಮಗೂ ಸಿಗುವಂತಾಗಬೇಕು.
- ಕೇವಲ ಕಟ್ಟಡದ ಕೆಲಸದಲ್ಲಿ ತೊಡಗಿರುವವರಿಗಲ್ಲದೇ ಎಲ್ಲಾ ರೀತಿಯ ಕೆಲಸ ಮಾಡುವವರಿಗೆ ಕಾರ್ಮಿಕರ ಗುರುತಿನ ಚೀಟಿ ಲಭ್ಯವಾಗುವಂತೆ ಮಾಡಬೇಕು.
- ವಿವಿಧ ಕಡೆಗಳಲ್ಲಿ, ಹಲವಾರು ಕೆಲಸಗಳಲ್ಲಿ ತೊಡಗಿರುವ ನಮಗೆ, ಕೆಲಸದ ಸ್ಥಳಗಳಲ್ಲಿ ಆಗುವ ಅವಘಡಗಳಿಂದ ನಮಗೆ ರಕ್ಷಣೆ ಬೇಕು. ಯಾವುದೇ ರೀತಿಯ ಅವಘಡ ಸಂಭವಿಸಿದರೆ ಆಗ ಉಂಟಾಗುವ ಖರ್ಚನ್ನು ಭರಿಸಲು, ಜೀವ ಹಾನಿಯುಂಟಾದರೆ, ನಮ್ಮ ಕುಟುಂಬಗಳ ಜೀವನೋಪಾಯಕ್ಕೆ ಪೂರಕವಾಗಿ ಅಪಘಾತ ವಿಮೆ ಮತ್ತು ಜೀವವಿಮೆ ಸರ್ಕಾರದಿಂದ ಸಿಗುವಂತಾಗಬೇಕು. ಅಲ್ಲದೇ ನಮಗೆ ಹಾಗೂ ನಮ್ಮ ಕುಟುಂಬದ ಎಲ್ಲಾ ಸದಸ್ಯರಿಗೆ ಆರೋಗ್ಯಕ್ಕೆ ಸಂಬಂಧಿಸಿದ ಸೌಲಭ್ಯಗಳು ಹಾಗೂ ವಿಮೆ ಒದಗಿಸಬೇಕು.
- ನಮ್ಮ ಕುಟುಂಬಗಳ ಮಹಿಳೆಯರು ಕೆಲಸಕ್ಕೆ ಹೋಗಿ ಬರುವಾಗ ನಾವು ವಾಸಿಸುವ ಪ್ರದೇಶಗಳಿಂದ ದೂರದವರೆಗೆ, ಕೆಲವೊಮ್ಮೆ ನಿರ್ಜನ ಪ್ರದೇಶಗಳಲ್ಲಿ ನಡೆದುಕೊಂಡು ಹೋಗುವ ಪ್ರಸಂಗವಿರುತ್ತದೆ. ಅಲ್ಲದೇ ನಮ್ಮ ಮಕ್ಕಳು ಶಾಲೆಗೆ ಹೋಗಿ

ಬರುವಾಗಲೂ ಇದೇ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಹೀಗಾಗಿ ನಾವು ವಾಸಿಸುವ ಪ್ರದೇಶಗಳಿಗೆ ಬಸ್ ವ್ಯವಸ್ಥೆ ಬೇಕು.

- ನಮ್ಮ ಸಮುದಾಯದ ಹಲವು ಕುಟುಂಬಗಳು ರೈಲ್ವೆ ಹಳಿಯ ಪಕ್ಕದಲ್ಲಿ ಇರುವ ಖಾಲಿ ಜಾಗಗಳಲ್ಲಿ ಜೋಪಡಿಗಳಲ್ಲಿ ವಾಸವಾಗಿದ್ದೇವೆ. ನಮ್ಮ ದಿನನಿತ್ಯದ ಕೆಲಸ ಕಾರ್ಯಗಳಿಗೆ ನಾವು ಈ ರೈಲ್ವೆ ಹಳಿಯನ್ನು ದಾಟಿ ಇನ್ನೊಂದು ಕಡೆಗೆ ಹೋಗಬೇಕು. ಇಂತಹ ಜಾಗಗಳಲ್ಲಿ ಯಾವುದೇ ರೈಲ್ವೆ ಕ್ರಾಸಿಂಗ್ ಸಂಕೇತಗಳ ವ್ಯವಸ್ಥೆ ಇಲ್ಲದಿರುವುದರಿಂದ, ರೈಲು ಬರುತ್ತಿರುವುದು ತಿಳಿಯದೇ ಅನೇಕರು ಅವಘಡಗಳಿಗೆ ತುತ್ತಾಗಿದ್ದಾರೆ. ಇಂತಹ ಜಾಗಗಳಲ್ಲಿ ರೈಲ್ವೆ ಕ್ರಾಸಿಂಗ್ ಸಂಕೇತಗಳನ್ನು ಅಳವಡಿಸಬೇಕು.
- ನಮ್ಮಲ್ಲಿ ಕೆಲವರು ಶ್ರಾಯಾವಾರು ವಲಸೆ ಬಂದು ಕೆಲಸ ಮಾಡುವವರಿದ್ದಾರೆ. ಅಂತಹ ಶ್ರಾಯಾವಾರು ವಲಸೆ ಕಾರ್ಮಿಕರಿಗೆ (Seasonal Migrants) ಕನಿಷ್ಟ ಮೂಲಭೂತ ಸೌಕರ್ಯಗಳಿರುವ(ಆರೋಗ್ಯ, ಶೌಚಾಲಯ, ಅಗತ್ಯ ನೀರು ಪೂರೈಕೆ, ಅಂಗನವಾಡಿ, ವಿದ್ಯುತ್ ಮುಂತಾದವು) ವಸತಿ ನಿರ್ಮಾಣವಾಗಬೇಕು.
- ಹೀಗೆ ಶ್ರಾಯಾವಾರು ವಲಸೆ ಕಾರ್ಮಿಕರ ಮಕ್ಕಳಿಗೆ ಋತುಮಾನ ಶಾಲೆಗಳು, ಫ್ಲೆಕ್ಸಿ ಶಾಲೆಗಳನ್ನು ಪ್ರಾರಂಭಿಸಬೇಕು. ಅಲ್ಲದೇ ಖಾಯಂ ಆಗಿ ಕೆಲಸ ಮಾಡುತ್ತಿರುವ ಊರಿನಲ್ಲಿಯೇ ನೆಲೆಸಿರುವ ನಾವು ದೊಡ್ಡವರು, ಯಾವುದಾರೂ ಕಾರಣಕ್ಕೆ ಸ್ವಂತ ಊರಿಗೆ ಹೋಗಿಬರುವ ಸಂದರ್ಭ ಬಂದಾಗ, ಶಾಲೆಗೆ ಹೋಗುವ ನಮ್ಮ ಮಕ್ಕಳಿಗೆ ತೊಂದರೆಯಾಗದಂತೆ ಉಳಿದುಕೊಳ್ಳಲು ವಸತಿ & ಊಟಕ್ಕೆ ಸೂಕ್ತ ವ್ಯವಸ್ಥೆ ಬೇಕು.
- ನಮ್ಮ ಮೂಲ ಊರುಗಳಲ್ಲಿ ಶಿಕ್ಷಣದ ಗುಣಮಟ್ಟ ಉತ್ತಮವಾಗಿಲ್ಲ. ಅಂತಹ ಸ್ಥಳಗಳಲ್ಲಿ ಗುಣಮಟ್ಟದ ಶಿಕ್ಷಣ ನಮ್ಮ ಮಕ್ಕಳಿಗೆ ದೊರೆಯುವಂತಾಗಬೇಕು.
- ನಮ್ಮ ಮಕ್ಕಳ ಶಿಕ್ಷಣ – ಅಂಗನವಾಡಿ, ಶಾಲೆ, ರಕ್ಷಣೆ, ಸೂಕ್ತ ಪೌಷ್ಟಿಕ ಆಹಾರ, ಹಾಸ್ಟೆಲ್ ಮತ್ತು ವಸತಿ ಶಾಲೆಗಳ ಪ್ರವೇಶಕ್ಕೆ ಮೊದಲ ಆಧ್ಯತೆ ನೀಡಬೇಕು. ಹಾಗೂ ಮಕ್ಕಳ ಶಿಕ್ಷಣಕ್ಕೆ ಪೂರಕವಾಗಿ ವಿದ್ಯಾರ್ಥಿ ವೇತನ ನೀಡುವಂತೆ ಮಾಡಲು ಕಾರ್ಯಕ್ರಮಗಳನ್ನು ತಮ್ಮ ಪ್ರಣಾಳಿಕೆಯಲ್ಲಿ ಸೇರಿಸಿಕೊಳ್ಳಬೇಕು.
- ನಾವು ವಾಸಿಸುತ್ತಿರುವ ಪ್ರದೇಶದ ಸಮೀಪದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಅಗತ್ಯವಾಗಿ ಇರಬೇಕು. ಆರೋಗ್ಯ ಕಾರ್ಯಕರ್ತೆಯರು ನಿಗದಿತವಾಗಿ ನಮ್ಮ ಸಮುದಾಯಕ್ಕೆ ಭೇಟಿ ನೀಡಿ ಅಗತ್ಯ ಆರೋಗ್ಯ ಸೇವೆ ನೀಡುವಂತಾಗಬೇಕು
- ನಮ್ಮ ಸಮುದಾಯದ ಮಹಿಳೆಯರ ಆರೋಗ್ಯ ಮತ್ತು ರಕ್ಷಣೆಗೆ ಹೆಚ್ಚಿನ ಕಾರ್ಯಕ್ರಮ ಹಾಕಿಕೊಳ್ಳಬೇಕು. ನಮ್ಮ ಸಮುದಾಯದಲ್ಲಿರುವ ಮಹಿಳೆಯರೂ ದಿನನಿತ್ಯ ಕೆಲಸಕ್ಕೆ ಹೋಗುತ್ತಾರೆ. ಅವರು ಮಾಡುವ ಕೆಲಸಕ್ಕೆ ಸಮಾನ ವೇತನ ಸಿಗುವಂತಾಗಬೇಕು.
- ವಲಸೆ ಕಾರ್ಮಿಕರಾದ ನಾವು ಕೆಲಸ ಮಾಡುವ ಸ್ಥಳಗಳಲ್ಲಿ ನಮಗೆ ಅತ್ಯಗತ್ಯವಾಗಿ ಬೇಕಾದಂತಹ ಮೂಲಭೂತ ಸೌಕರ್ಯಗಳಾದ ನೀರು, ಪೌಷ್ಟಿಕ ಆಹಾರ, ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು ಶಿಶು ಮಂದಿರಗಳು ಮುಂತಾದವುಗಳ ವ್ಯವಸ್ಥೆ ಬೇಕು. ಇಲ್ಲವಾದರೆ ಜೀವನೋಪಾಯಕ್ಕಾಗಿ ದುಡಿಮೆ ಅಗತ್ಯವಾದ ನಮಗೆ, ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವುದಕ್ಕೋಸ್ಕರ ಸ್ವಲ್ಪ ನಮ್ಮ ದೊಡ್ಡ ಮಕ್ಕಳನ್ನು ಶಾಲೆ ಬಿಡಿಸುವ ಪ್ರಸಂಗ ಎದುರಾಗುತ್ತದೆ.

ಕಟ್ಟಡ ಮತ್ತು ಇತರೇ ನಿರ್ಮಾಣ ವಲಸೆ ಕಾರ್ಮಿಕರ ಸಂಘದ ಪರವಾಗಿ

ಹೆಚ್ಚಿನ ಮಾಹಿತಿಗಾಗಿ,

ಸಂಗಪ್ಪ
ಅಧ್ಯಕ್ಷರು,
9880457280; 7019120153

ಚೆನ್ನಪ್ಪ
ಸದಸ್ಯರು
8861997263

ಕಟ್ಟಡ ಮತ್ತು ಇತರೇ ನಿರ್ಮಾಣ ವಲಸೆ ಕಾರ್ಮಿಕರ ಸಂಘ, ಕರ್ನಾಟಕ ರಾಜ್ಯ